ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು–01**

ಸಂಖ್ಯೆ:ಸಿ7(4)ಪ್ರಾ.ಶಿ.ಅ/ಶಾ.ಮ.ಲೈ.ಕಿ40/2014–15 ದಿನಾಂಕ: 20–11–2014

**ಸುತ್ತೋಲೆ–01**

ವಿಷಯ: ಅನಧಿಕೃತ ಶಾಲೆಗಳ ಕುರಿತಾಗಿ ಸಾರ್ವಜನಿಕರ ಗಮನಕ್ಕೆ ಪತ್ರಿಕೆಗಳಲ್ಲಿ ಪ್ರಕಟಣೆ ನೀಡುವ ಬಗ್ಗೆ
ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ7(2)/ಪ್ರಾ.ಶಿ.ಅ/ಶಾ.ಮ.ಲೈ.ಕಿ 40/2014–15
ದಿನಾಂಕ:23/07/2014, 26.09.2014, 30.10.2014 ಹಾಗು 05.11.2014.

****

ವ್ಯಾಪ್ತಿಯ ಎಲ್ಲ ಅನಧಿಕೃತ ಸಂಸ್ಥೆಗಳ ಕುರಿತು ಕೆಳಗಿನ ಅಂಶಗಳನ್ನು ಕಡ್ಡಾಯವಾಗಿ ಒಳಗೊಂಡಂತೆ ಅತ್ಯಂತ ತುರ್ತಾಗಿ ಸ್ಥಳೀಯವಾಗಿ ಪ್ರಮುಖವಾದ ಎರಡು ದೈನಿಕಗಳಲ್ಲಿ ಪ್ರಚುರಪಡಿಸುವುದು. ಪ್ರಕಟಣೆಯನ್ನು ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಉಪನಿರ್ದೇಶಕರು ಜಂಟಿಯಾಗಿ ನೀಡತಕ್ಕದ್ದು. ಅಧಿಕಾರಿಯ ಭಾವಚಿತ್ರವನ್ನು ಬಳಸುವುದು ಬೇಡ. ಈ ಕಾರ್ಯದಲ್ಲಿ ಉದಾಸೀನ ತೋರುವ ಯಾವುದೇ ಅಧಿಕಾರಿಯವರು ಕರ್ತವ್ಯ ಲೋಪದ ಆರೋಪಗಳನ್ನು ಎದುರಿಸಬೇಕಾಗುತ್ತದೆ.

**ಪ್ರಕಟಣೆಯ ಪ್ರಮುಖ ಅಂಶಗಳು:**

**ಅ) ಸಾರ್ವಜನಿಕರ ಗಮನಕ್ಕೆ :**

- ವ್ಯಾಪ್ತಿಯ ಪೋಷಕರು/ವಿದ್ಯಾರ್ಥಿಗಳು/ಸಾರ್ವಜನಿಕರಲ್ಲಿ ತಮ್ಮ ಮಗುವು ವ್ಯಾಸಂಗ ಮಾಡುತ್ತಿರುವ ಶಾಲೆಯ ನೋಂದಣಿ, ಮಾನ್ಯತೆ ಮತ್ತು ಸಿಬಿಎಸ್‌ಇ/ಐಸಿಎಸ್‌ಇ ಶಾಲೆಗಳಾಗಿದ್ದರೆ ಸರ್ಕಾರದ ನಿರಾಕ್ಷೇಪಣಾ ಪತ್ರ ಮತ್ತು ಸಂಬಂಧಿತ ಮಂಡಳಿಯಿಂದ ಸಂಯೋಜನೆ ಪಡೆದಿರುವ ಬಗ್ಗೆ ಕಡ್ಡಾಯವಾಗಿ ಪರಿಶೀಲಿಸಿಕೊಳ್ಳಲು ವಿನಂತಿಸಿಕೊಳ್ಳತಕ್ಕದ್ದು.
- ವ್ಯಾಪ್ತಿಯ ಪೋಷಕರು/ವಿದ್ಯಾರ್ಥಿಗಳು/ಸಾರ್ವಜನಿಕರಲ್ಲಿ ತಮ್ಮ ಮಗುವಿನ ದಾಖಲಾತಿಯನ್ನು ಮಾಡಿಸುವ ಸಂದರ್ಭದಲ್ಲಿ ಶಾಲೆಯ ನೋಂದಣಿ, ಮಾನ್ಯತೆ ಮತ್ತು ಸಿಬಿಎಸ್‌ಇ/ಐಸಿಎಸ್‌ಇ ಶಾಲೆಗಳಾಗಿದ್ದರೆ ಸರ್ಕಾರದ ನಿರಾಕ್ಷೇಪಣಾ ಪತ್ರ ಮತ್ತು ಸಂಬಂಧಿತ ಮಂಡಳಿಯಿಂದ ಸಂಯೋಜನೆ ಪಡೆದಿರುವ ಬಗ್ಗೆ ಕಡ್ಡಾಯವಾಗಿ ಪರಿಶೀಲಿಸಿಕೊಳ್ಳಲು ವಿನಂತಿಸಿಕೊಳ್ಳತಕ್ಕದ್ದು.
- ಉಪನಿರ್ದೇಶಕರ ಅಥವಾ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಹಾಗು ಇಲಾಖಾ ವೆಬ್ ಸೈಟ್ www.schooleducation.kar.nic.in ನಲ್ಲಿ ಅನಧಿಕೃತ ಸಂಸ್ಥೆಗಳ ಮಾಹಿತಿ ದೊರೆಯಲಿದೆ ಎಂಬ ಬಗ್ಗೆ ತಿಳಿಸುವುದು

**ಆ) ಶಾಲೆಗಳ ಗಮನಕ್ಕೆ :**

- ವ್ಯಾಪ್ತಿಯ ಎಲ್ಲಾ ಶಾಲೆಗಳು ಮಾನ್ಯತೆ ಪಡೆಯಲು/ಮಾನ್ಯತೆ ನವೀಕರಿಸಿಕೊಳ್ಳಲು ಹಾಗೂ ಹೊಸ ಶಾಲೆಗಳಾಗಿದ್ದಲ್ಲಿ ದಿ: 11.11.2014 ರ ಸರ್ಕಾರಿ ಆದೇಶದಂತೆ ಕ್ರಮ ವಹಿಸಿ ನಿಯಮಾನುಸಾರ ನೋಂದಣಿ/ಮಾನ್ಯತೆ ಬಗ್ಗೆ ಪ್ರಸ್ತಾವನೆ ಸಲ್ಲಿಸಿ ಯಾವ ಶೈಕ್ಷಣಿಕ ಸಾಲಿಗೆ ಅನುಮತಿ ದೊರೆಯುತ್ತದೆಯೋ ಅಂತಹ ಸಾಲಿನಿಂದ ಮಾತ್ರ ಶಾಲೆಯನ್ನು ಪ್ರಾರಂಭಿಸಬೇಕು.
- ಐಸಿಎಸ್‌ಇ /ಸಿಬಿಎಸ್‌ಇ ಶಾಲೆಗಳಾಗಿದ್ದಲ್ಲಿ ಕಡ್ಡಾಯವಾಗಿ ಸರ್ಕಾರದ ನಿರಾಕ್ಷೇಪಣಾ ಪತ್ರ ಮತ್ತು ಸಂಬಂಧಿತ ಕೇಂದ್ರೀಯ ಮಂಡಳಿಯಿಂದ ಪಡೆದಿರುವ ಸಂಯೋಜನೆಯ ದೃಢೀಕೃತ ಪ್ರತಿ ಸಹಿತವಾಗಿ ಆರ್.ಟಿ.ಇ ಕಾಯಿದೆ ನಿಯಮಾವಳಿಗಳಂತೆ ಸ್ಥಳೀಯ ಸಕ್ಷಮ ಪ್ರಾಧಿಕಾರಿಯವರಿಂದ ಮಾನ್ಯತೆ ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸುವುದು. ಹೊಸ ಐಸಿಎಸ್‌ಇ/ಸಿಬಿಎಸ್‌ಇ ಶಾಲೆಗಳಾಗಿದ್ದರೂ ಸಹ ಇದೇ ನಿಯಮ ಅನ್ವಯಿಸುತ್ತದೆ. ನೋಂದಣಿ/ಮಾನ್ಯತೆ/ಸಂಯೋಜನೆ ದಾಖಲೆಗಳನ್ನು ಸಂಸ್ಥೆಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು.

- ವ್ಯಾಪ್ತಿಯ ಎಲ್ಲಾ ಶಾಲಾ ಆಡಳಿತ ಮಂಡಳಿಗಳು ಸಂಬಂಧಿಸಿದ ಶಾಲೆಗಳಿಗೆ ಯಾವುದೇ ಸಂದರ್ಭದಲ್ಲಿ ಅಧಿಕೃತ ತಪಾಸಣಾ ಭೇಟಿಗೆ ಆಗಮಿಸುವ ಇಲಾಖೆಯ ಅಧಿಕಾರಿಗಳು ಅಥವಾ ಇಲಾಖೆಯಿಂದ ನೇಮಕಗೊಂಡ ತಂಡಗಳಿಗೆ ಎಲ್ಲಾ ಸಹಕಾರವನ್ನು ನೀಡಲು ಮತ್ತು ಅಗತ್ಯ ದಾಖಲೆಗಳನ್ನು ತಪಾಸಣೆಗೆ ಒದಗಿಸುವುದು. ಆರ್.ಟಿ.ಇ ಕಾಯಿದೆ ನಿಯಮಗಳಂತೆ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಕೇಂದ್ರೀಯ ಮಂಡಳಿಗಳಿಗೆ ಸಂಯೋಜಿತವಾದ ಶಾಲೆಗಳಿಗೆ ಭೇಟಿ ನೀಡುವ ಮತ್ತು ಪರಿಶೀಲಿಸುವ ಅಧಿಕಾರವಿದೆ. ಅಸಹಕಾರ ಧೋರಣೆಯನ್ನು ತೋರುವ ಶಾಲೆಗಳ ವಿರುದ್ಧ ಕಠಿಣವಾದ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂಬುದನ್ನು ತಿಳಿಯಪಡಿಸುವುದು.
- ಅನಧಿಕೃತ ಸಂಸ್ಥೆಗಳ ವಿರುದ್ಧ ರಾಜ್ಯದ 'ಅನಧಿಕೃತ ಮತ್ತು ಸಂಯೋಜಿತವಾಗಿಲ್ಲದ ಸಂಸ್ಥೆಗಳಲ್ಲಿ ಪ್ರವೇಶ ನಿಷೇಧ ಅಧಿನಿಯಮ-1992' ರ ಸೆಕ್ಷನ್‌ಗಳನ್ನು ಜಾರಿಗೊಳಿಸಿ ಅಂತಹ ನಿಯಮಬಾಹಿರ ಸಂಸ್ಥೆಯ ವಿರುದ್ಧ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಸಕ್ಷಮ ಪ್ರಾಧಿಕಾರಿಯವರು ಪ್ರಕರಣ ದಾಖಲಿಸಲಿದ್ದಾರೆ ಎಂಬ ಅಂಶವನ್ನು ತಿಳಿಯಪಡಿಸುವುದು.
- ಅಲ್ಲದೇ ಮಕ್ಕಳ ಸುರಕ್ಷತೆಯ ಬಗ್ಗೆ ಶಾಲೆಗಳು ಕೈಗೊಳ್ಳಬೇಕಾದ ಕ್ರಮಗಳು ಮತ್ತು ಎಸ್.ಡಿ.ಎಂ.ಸಿ ವಿವರ, ಪಿ.ಟಿ.ಎ ಸಮಿತಿ ವಿವರ ಹಾಗೂ ವ್ಯಾಪ್ತಿಯ ಪೋಲಿಸ್ ಠಾಣೆಯಿಂದ ದೊರೆಯಬಹುದಾದ ಸಹಕಾರದ ಕುರಿತಂತೆಯೂ ವಿವರಗಳನ್ನು ನಮೂದಿಸುವುದು. ಎಸ್.ಡಿ.ಎಂ.ಸಿ/ಪಿ.ಟಿ.ಎ ಹೊಂದದೇ ಇರುವ ಶಾಲೆ ಅಥವಾ ಪಿಟಿಎ ರಚನೆಯಾಗಿದ್ದು, ನಿಷ್ಕ್ರಿಯವಾಗಿರುವ ಶಾಲೆಗಳ ವಿರುದ್ಧ ಮಾನ್ಯತೆ ರದ್ದು/ಸಂಯೋಜನೆ ರದ್ದು ಕ್ರಮವಾಗಲಿದೆ ಎಂಬ ಅಂಶವನ್ನು ತಿಳಿಯಪಡಿಸುವುದು.
- ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆಯದೇ ಯಾವುದೇ ಶಾಲೆಗಳು ಅಲ್ಪಸಂಖ್ಯಾತ ಶಾಲೆ ಎಂಬುದಾಗಿ ಘೋಷಿಸಿಕೊಳ್ಳುವಂತಿಲ್ಲ ಎಂಬುದನ್ನು ತಿಳಿಯಪಡಿಸುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,
ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ.
ರಾಜ್ಯದ ಎಲ್ಲ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರ ಮುಖಾಂತರ)